ಕಾಲಾವಕಾಶ ಬೇಕು. ಕಾಲಾನಂತರದ ಭಾಷಿಕ ಸಾಮರ್ಥ್ಯ ಬೇಕು. ವಿದ್ಯುನ್ಮಾನ ಮಾಧ್ಯಮಗಳಲ್ಲಿ ಅಭಿವ್ಯಕ್ತಿಯನ್ನು ಎಟುಕಿಸಿಕೊಂಡಿರುವ ಕನ್ನಡ ಅಭಿವ್ಯಕ್ತಿಯು ಇಕ್ಕಟ್ಟಿನಲ್ಲಿದೆ... ಒಂದು ಕಾಲದ ಕಥೆಗಾರರೇ ಎಲ್ಲ ಕಾಲದ ಕಥೆ ಹೇಳಬೇಕು ಎಂಬ ನಿರೀಕ್ಷೆಗಳು ಸುಲಭ ಅಲ್ಲ. ಆಯಾ ಕಾಲಮಾನದ ಅಭಿವ್ಯಕ್ತಿಯೇ ಕಥನ ಪರಂಪರೆಯ ಬಾಗಿಲುಗಳ ತೆರೆಯುತ್ತ ಅಲೆಯಂತೆ ಸಾಗಬೇಕು.

ನನ್ನ ಕಥೆಗಳಿಗೆ ಮೊದಲಿಗೆ ಈ ಕಾಲು ಶತಮಾನದ ಹಿಂದೆ ಎಚ್.ಎಸ್. ರಾಘವೇಂದ್ರರಾವ್ ಅವರು 'ಪ್ರಜಾವಾಣಿ' ದೀಪಾವಳಿ ಕಥಾ ಸ್ಪರ್ಧೆಯಲ್ಲಿ 'ಬುಗುರಿ' ಕಥೆಗೆ ಬರೆದ ವಿಮರ್ಶೆಯೇ ಈವರೆಗೆ ನಾನು ಕಂಡ ಒಳ್ಳೆಯ ಒಂದು ವಿಮರ್ಶೆ. ಅದೇ ಕಾಲಕ್ಕೆ ರಾಜೇಂದ್ರ ಚೆನ್ನಿ ಅವರು ಬರೆದಿದ್ದರು. ಲಂಕೇಶ್, ಡಿ.ಆರ್. ನಾಗರಾಜ್ ಬರೆದಿದ್ದರು. ಅನಂತರ ಯಾರು ಏನು ಬರೆದರೊ ನನಗೆ ಗೊತ್ತಿಲ್ಲ.

ಯಾವ ಒಂದು ಕಥೆಯೂ ಒಂದೇ ನುಡಿಗೆ ಎಂದೆಂದೂ ಮುಗಿಯುವುದಿಲ್ಲ. ನಾನು ಭಾಗಶಃ ನನ್ನ ಒಂದು ಕೇರಿಯ ಅದೇ ಒಂದು ಕಥೆಯನ್ನು ಮತ್ತೆ ಮತ್ತೆ ಬರೆಯುತ್ತಿರಬಹುದು... ಅದನ್ನು ನಾನಿನ್ನೂ ಮುಗಿಸಲು ಸಾಧ್ಯವಾಗಿಲ್ಲ. ತಾರೆಗಳ ಹಾಗೆ ನನ್ನ ಕೇರಿಗಳಲ್ಲಿ ಮತ್ತೆ ಮತ್ತೆ ಕಥೆಗಳು ಮಿನುಗುತ್ತಲೇ ಇರುತ್ತವೆ. ಆ ಮಿನುಗಿನ ಬೆಳಕನ್ನು ಕಥನ ದಾಹದ ಹಾದಿಗೆ ತಂದು ಬೆಸೆಯಲು ನಾನೀಗಲೂ ಧ್ಯಾನಿಸುತ್ತ, ಕಷ್ಟ ಪಡುತ್ತ ಬದಲಾದ ಕಾಲದಲ್ಲಿ ಚಡಪಡಿಸುತ್ತಿರುವೆ. ಇಂತಿರುವಾಗ ಕಥೆ ಬರೆಯಲಾಗದ ತಾರೆಗಳ ರಾತ್ರಿಗಳೇ ನನ್ನ ಸೃಜನಶೀಲತೆಯಲ್ಲಿ ಹೆಚ್ಚು, ಬೆಳಕಾದಾಗ ಅಂತಹ ಕಥೆಗಳ ನೆನಪೇ ಆಗುವುದಿಲ್ಲ. ಮುಟ್ಟಲಾಗದ, ಬರೆಯಲಾಗದ ಭಾವದ ಕಥೆಯ ಅತೃಪ್ತಿಯ ಕಾರಣದಿಂದಲೇ ನಾನಿನ್ನೂ ಕಥೆ ಬರೆಯುತ್ತಿರುವೆ.

ಈ ಕಾಲದ ಕಥೆಗಾರರು ನಮ್ಮ ನಿರೀಕ್ಷೆಯ ಎದೆಯ ಕದವ ಮುಟ್ಟಿಲ್ಲ ನಿಜ. ಮಹತ್ವದ ಹೊಸ ಕಥೆಗಾರರು ಹುಟ್ಟಲಿಲ್ಲ ಎಂಬುದು ಒಂದು ಸಾಮೂಹಿಕ ಹೊಣೆಗಾರಿಕೆ. ವಿಶ್ವವಿದ್ಯಾಲಯಗಳ ಶಿಷ್ಟ ಪಾಠಗಳಿಂದ ಸಾಹಿತ್ಯವನ್ನು ಕಲಿಸಲಾಗದು. ಸೃಜನಶೀಲತೆಗೆ ಮಾರ್ಗದರ್ಶಕರಿಲ್ಲ. ಬರಹಗಾರರನ್ನು ಉತ್ಪಾದಿಸಲು ಸಾಧ್ಯವಿಲ್ಲ. ಅದು ಸಂವೇದನಾಶೀಲ ಯುವ ಜನಾಂಗದ ಕಾಣ್ಕೆಯಿಂದ ಮಾತ್ರ ಸಾಧ್ಯ. ಮಾಧ್ಯಮಗಳು ಸಂವೇದನೆಯ ಹದ ಕೆಡಿಸಿವೆ. ಸಾಹಿತ್ಯ ಸಂಸ್ಥೆಗಳ ಯಜಮಾನರು ಹೊಸ ಆವಿಷ್ಕಾರಗಳಿಗೆ ಬೀಗ ಹಾಕಿದ್ದಾರೆ. ಸಂಭ್ರಮಕ್ಕೂ, ಸೂತಕಕ್ಕೂ ವ್ಯತ್ಯಾಸವೇ ಇಲ್ಲದಂತೆ ಅಸಾಹಿತ್ಯಿಕ ಅಕ್ರಮಗಳು ಜರುಗುತ್ತಿವೆ. ಇಂತಲ್ಲಿ ಯುವ ಜನಾಂಗದ ಕಥನಗಳಿಗೆ ದಾರಿಯೇ ಇಲ್ಲದಂತಿದೆ.

ಹಾಗೆಯೇ ಈ ಕಾಲದ ಯುವ ಕಥೆಗಾರರ ಅನುಭವವೇ ನೀರಸವಾಗಿದೆ. ಅವರ ಭಾಷೆಯೇ ಹಾಳಾಗಿದೆ. ಅವರವರ ಹಿನ್ನೆಲೆಗಳೇ ರೂಢಿಗೊಂಡ ಭಾವಗಳಲ್ಲಿ ಬಂದಿಯಾಗಿವೆ. ಮುಂದಣ ಹೆಜ್ಜೆಗೂ ಈಗ ಗುರುತಿಲ್ಲವೇನೊ... ಅದರ ಹಂಗಿಲ್ಲವೇನೊ... ವರ್ತಮಾನದ ರಾಜಕೀಯ ಇಲ್ಲವೇ ಸಾಹಿತ್ಯ ಗುಂಪಿನ ಲಂಗು ಸಾಕಾನೋ... ಇಂತಲ್ಲ ಈ ಕಾಲದ ಕಥೆಗಾರರ ಬಗ್ಗೆ ಹೆಚ್ಚೇನನ್ನೂ ನಾನು ಹೇಳಲಾರೆ.

ಈ ಸ್ಥಿತಿಯಲ್ಲಿ ಕಥೆಯ ಹೊಕ್ಕಳು ಬಳ್ಳಿಯ ಪ್ರಜ್ಞೆಯೇ ಇಲ್ಲದ ಕಥೆಗಾರರ ಬಗ್ಗೆ ನಾನು ಏನೆಂದು ಸಲಹೆ ನೀಡಲಿ... ಕಥೆ ಹೇಳಲು ತಂತ್ರ, ನಿರೂಪಣೆಗಳು ಕೇವಲ ಕೌಶಲ್ಯ ಅಷ್ಟೇ... ಕಥೆಗೆ ಬೇಕಾದದ್ದು ಮಾನವತ್ವದ ಹೊಕ್ಕಳು ಬಳ್ಳಿ. ಈಗ ಅದು ಅಷ್ಟು ಲಾಭದಾಯಕ ಸರಕು ಅಲ್ಲ ಎನಿಸಿದೆ. ನಿಜವಾದ ಕಥನ ಮಾಯಕಾರ ಹುಟ್ಟಿಬರಲೇಬೇಕಾದದ್ದು ಇಂತಹ ಕಾಲಮಾನದಲ್ಲೇ... ಕನ್ನಡ ಕಥಾ ಪರಂಪರೆಯಲ್ಲಿ ಅಂತಹ ಪವಾಡಗಳು ಇದ್ದಕ್ಕಿದ್ದಂತೆ ಆಗಿಬಿಡುತ್ತವೆ. ಆ ದಿನಗಳಿಗಾಗಿ